# ಜಾನಪದ ಸಾಹಿತ್ಯದಲ್ಲಿ ಐತಿಹಾಸಿಕ ನಾಯಕರು

**ತಿಪ್ಪೇಸ್ವಾಮಿ ಡಿ.ಎಸ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

**DOI: https://doi.org/10.5281/zenodo.18008058**

## ABSTRACT:

ಜಾನಪದ ಸಾಹಿತ್ಯವು ಜನರ ಬದುಕು, ನಂಬಿಕೆ, ಹೋರಾಟ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುವ ಜೀವಂತ ಪರಂಪರೆ. ಈ ಸಾಹಿತ್ಯದಲ್ಲಿ ಐತಿಹಾಸಿಕ ನಾಯಕರು ಜನಮನದಲ್ಲಿ ರೂಪುಗೊಂಡ ವೀರತ್ವದ ಪ್ರತಿರೂಪಗಳಾಗಿ ಕಾಣಿಸುತ್ತಾರೆ. ಅವರು ಕೇವಲ ಐತಿಹಾಸಿಕ ವ್ಯಕ್ತಿಗಳಷ್ಟೇ ಅಲ್ಲ; ಜನರ ಆಶೆ–ಆಕಾಂಕ್ಷೆ, ನ್ಯಾಯ, ಬುದ್ಧಿ ಮತ್ತು ಸ್ವಾಭಿಮಾನವನ್ನು ಪ್ರತಿನಿಧಿಸುವ ಪಾತ್ರಗಳಾಗಿದ್ದಾರೆ. ಜನಪದ ಹಾಡುಗಳು, ಕಥೆಗಳು, ಕಾವ್ಯಗಳು ಮತ್ತು ಬಯಲಾಟಗಳಲ್ಲಿ ಈ ನಾಯಕರು ಅತಿಶಯೋಕ್ತಿಯಿಂದ, ಪೌರಾಣಿಕ ಅಂಶಗಳೊಂದಿಗೆ ಚಿತ್ರಿತರಾಗುತ್ತಾರೆ. ಅವರ ಶೌರ್ಯ, ತ್ಯಾಗ, ಧೈರ್ಯ ಮತ್ತು ಜನಪರ ಹೋರಾಟಗಳು ಪ್ರಮುಖವಾಗಿ ಹೇಳಲ್ಪಡುತ್ತವೆ. ಇತಿಹಾಸದಲ್ಲಿ ಕಂಡ ಘಟನೆಗಳು ಜನಪದ ರೂಪದಲ್ಲಿ ಕಾಲಕಾಲಾಂತರವಾಗಿ ರೂಪಾಂತರಗೊಂಡು ಜನರ ಮನದಾಳದಲ್ಲಿ ಶಾಶ್ವತವಾಗಿ ಉಳಿಯುತ್ತವೆ.

## KEYWORDS:

ಜಾನಪದ, ಛಟ್ಟುಸಿಂಗ್, ಲಾವಣಿಗಳು, ಖಜಾನೆ, ರಾಷ್ಟ್ರಾಭಿಮಾನ, ಕರಬಲ್ ಪದಕಾರ.

### ಪ್ರಸ್ತಾವನೆ:

ಜಾನಪದ ಸಾಹಿತ್ಯ ಜನರ ಬದುಕಿನ ಚರಿತ್ರೆಯನ್ನೇ ಹೊತ್ತಿದೆ. ಹೀಗಾಗಿ ಜಾನಪದದ ಸಾಂಸ್ಕೃತಿಕ ಬದುಕಿನ ದಾಖಲೀಕರಣವನ್ನು ಜಾನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಜನರ ಜೀವನ ಮೌಲ್ಯಗಳು ಜಾನಪದದ ಸಾಂಸ್ಕೃತಿಕ ಬದುಕಿನಲ್ಲಿಯ ಗಟ್ಟಿಗಳು, ಜನರು ತಮ್ಮ ಜೀವನದ ಅರ್ಥವಂತಿಕೆಯನ್ನು ಸಾರ್ಥಕತೆಯನ್ನು ಇಂತಹ ಮೌಲ್ಯಗಳನ್ನಾಧರಿಸಿಯೇ ಕಂಡುಕೊಳ್ಳುತ್ತಾರೆ. ಈ ಜೀವನ ಮೌಲ್ಯಗಳ ವ್ಯಾಪಕ ನಿರೂಪಣೆಗಳನ್ನು ಜಾನಪದ ಗೀತೆಗಳು, ಲಾವಣಿಗಳು, ಕೋಲಾಟದ ಪದಗಳು ಇತ್ಯಾದಿ ಅವುಗಳನ್ನು ಹಾಡಿ ಊರೂರಿನ ಜನತೆಯನ್ನು ಪ್ರೇರೇಪಿಸುವ, ಆ ಕಾಲದ ಐತಿಹಾಸಿಕ ಘಟನೆಗಳನ್ನು ಕಣ್ಮುಂದೆ ತರುವ ಪ್ರಯತ್ನ ನಡೆದವು ಅವು ಜನಜಾಗೃತಿಗೆ ಕಾರಣವಾದವು. ಒಟ್ಟಾರೆ ಲಾವಣಿಗಳು ಸಮರ ಬಂದಾಗ ಜನಜಾಗೃತಿಗೊಳಿಸಿ ಹೋರಾಡಲು ಹುರುಪುಗೊಳಿಸುವ ಸಮ್ಮೋಹನಾಸ್ತ್ರ. ಈ ಲಾವಣಿಗಳಲ್ಲಿ ಪ್ರಮುಖವಾದವು ಸಂಗೊಳ್ಳಿ ರಾಯಣ್ಣ ದಂಗೆ, ಹಲಗಲಿ ಬೇಡರು, ನರಗುಂದದ ಬಾಬಾಸಾಹೇಬ, ಸಿಂಧೂರ ಲಕ್ಷ್ಮಣ ಇತ್ಯಾದಿ ಐತಿಹಾಸಿಕ ನಾಯಕರನ್ನು ಜಾನಪದ ಸಾಹಿತ್ಯದ ಗೀತೆಗಳಲ್ಲಿ ಕಾಣುತ್ತೇವೆ.

### ವೀರನಾಯಕ ಸಂಗೊಳ್ಳಿ ರಾಯಣ್ಣ:

“ಜನನಿ ಜನ್ಮಭೂಮಿಶ್ಚ ಜನ್ಮದಾತ್ರೀ ಚ ಜನ್ಮಭೂಃ” ಎಂಬ ಉಕ್ತಿಗೆ ಅಕ್ಷರಶಃ ಮೆರಗು ತಂದುಕೊಟ್ಟವನೆಂದರೆ, ಕಿತ್ತೂರಿನ ವೀರನಾಯಕ ಸಂಗೊಳ್ಳಿ ರಾಯಣ್ಣ. ಕಿತ್ತೂರಿನ ವಿಮುಕ್ತಿಗಾಗಿ ತನ್ನ ಜೀವವನ್ನೇ ಬಲಿಕೊಟ್ಟ ವೀರಯೋಧ. ಕಿತ್ತೂರ ಸಂಸ್ಥಾನದ ವಾರಸುದಾರನಾದ ಶಿವಲಿಂಗಸರ್ಜನಿಗೆ ಪಟ್ಟಗಟ್ಟುವ ಪ್ರತಿಜ್ಞೆ ಮಾಡಿ ಸೈನ್ಯವನ್ನು ಸಂಘಟಿಸಿ

ಇಂಗ್ಲಿಷರ ವಿರುದ್ಧ ದಂಗೆ ಎದ್ದನು. ಅವನ ರಾಷ್ಟ್ರಾಭಿಮಾನ ಹಾಗೂ ರಾಣಿ ಚನ್ನಮ್ಮನ ಮೇಲಿರುವ ನಿಷ್ಠೆ ಮುಂದಿನ ಪೀಳಿಗೆಗೆ ಮಾದರಿಯಾಯಿತು. ಇವನು ಇಂಗ್ಲಿಷರ ಕಚೇರಿಗಳನ್ನು ಧ್ವಂಸ ಮಾಡಿದನು, ಖಜಾನೆಗಳನ್ನು ಲೂಟಿ ಮಾಡಿದನು. ಸುರಪುರದ ನಾಯಕ ಮುಂತಾದ ಗಣ್ಯರು ಇವನಿಗೆ ಬೆಂಬಲವಿತ್ತರು. ಇವನ ದಾಳಿಗೆ ತತ್ತರಿಸಿದ ಕಂಪನಿ ಸರ್ಕಾರದ ಕಚೇರಿಗಳನ್ನು ಸುಡುವ ಮೂಲಕ ಪ್ರತಿಭಟನೆ ತೋರಿದ್ದಲ್ಲದೆ ಸುತ್ತ ಮುತ್ತಲಿನ ಗ್ರಾಮಗಳನ್ನು ದೋಚಿ ಸುಟ್ಟನು.

**ಸಂಗೊಳ್ಳಿ ನೆಲದಿ ಹುಟ್ಟಿದ ವೀರ**
**ಕಿತ್ತೂರ ಧ್ವಜ ಎತ್ತಿದ ಧೀರ**
**ಕಂಪನಿ ಸೈನ್ಯಕ್ಕೆ ಸಡ್ಡು ಹೊಡೆದ**
**ರಾಯಣ್ಣನ ಹೆಸರು ಅಮರವಾಗುತೆ**
**ಹೀಗೆ ರಾಯಣ್ಣನ ಕುರಿತು ಲಾವಣಿಕಾರರು ವರ್ಣಿಸಿದ್ದಾರೆ.**
**ಸುಟ್ಟ ಕಚೇರಿ ಲೂಟಿ ಸಂಪಗಾವಿ ಮಾಡಿ ಬರುವೆನಂತಾನೊ**
**ಕೇಳ ಎರಡ ಸಾವಿರ ದಂಡ ಸಾಹೇಬ ತಗೊಂಡ ಬಂದಾನೊ**

ಎಂದಿದ್ದಾನೆ ಕರಬಲ್ ಪದಕಾರ. ಧಾರವಾಡದಲ್ಲಿದ್ದ ಕಂಪನಿ ಸರ್ಕಾರದ ಅಧಿಕಾರಿ ತನ್ನ ಸೈನ್ಯ ಕಳಿಸಿ ರಾಯಣ್ಣನನ್ನು ಹೀಗೆ ಬಗ್ಗು ಬಡಿಯಲು ಯತ್ನಿಸಿದ. ಬ್ರಿಟಿಷ್ ಸೈನ್ಯಕ್ಕೆ ಅಪಾರ ನಷ್ಟ ಮಾಡಿ ರಾಯಣ್ಣ ಕಿತ್ತೂರಿನ ಅವರ ಸೈನ್ಯದ ಮೇಲೆ ಎರಗಿದ. ಅವರ ಬೆಂಬಲಿಗರು ಅನೇಕ ಹಳ್ಳಿಗಳನ್ನು ಲೂಟಿ ಮಾಡಿದರು. ಬ್ರಿಟಿಷರು ರಾಯಣ್ಣನನ್ನು ಹಿಡಿದುಕೊಟ್ಟವರಿಗೆ ಬಹುಮಾನ ಮತ್ತು ಹಣವನ್ನು ನೀಡುವುದಾಗಿ ಸಾರಿದರು.

**ಅರಣ್ಯದೊಳಗೆ ಅಲೆದಾಡುತ**
**ರಾಯಣ್ಣನ ಹಾದಿ ಕಾವಲುತ**
**ಬುಕ್ಕಲು ಮನಸುಳ್ಳವರೊಬ್ಬ**
**ರಾಯಣ್ಣನನ್ನ ಹಿಡಿದುಕೊಟ್ಟ**
**ಬೆಳ್ಳಿ ನಾಣ್ಯದ ಆಸೆಗೆ ಬಿದ್ದು**
**ಸ್ವಾರ್ಥದ ಬಲೆಗೆ ಬಿದ್ದು**
**ವೀರನ ಕೈಯಲಿ ಕೈಕಟ್ಟಿ**
**ಅಂಗೈಯಲ್ಲೇ ದುಃಖ ಬರೆದ**
**ಅಯ್ಯೋ ರಾಯಣ್ಣ ನಮ್ಮ ಶೂರ**
**ನಿನ್ನ ಮೇಲೆ ನಡೆದ ದ್ರೋಹ ಬಾರ**
**ಬೆನ್ನಿಗೆ ಚೂರಿ ಹಾಕಿದವರು**
**ಮಣ್ಣಲ್ಲೇ ಮರೆದು ಹೋದರು**
**ತಾಯಿ ಮಣ್ಣಿಗಾಗಿ ಬಾಳಿದ ವೀರ**
**ಬಾಳಲ್ಲೇ ಸೋಲದ ಧೀರ**
**ದೇಹ ಬಂಧನದಲ್ಲಿದ್ದರೂ**
**ಹೆಸರು ಅಮರವಾಗಿ ಉಳಿದ**

ಹೀಗೆ ಜಾನಪದ ಹಾಡುಗಳಲ್ಲಿ ವೆಂಕನಗೌಡ, ನಿಂಗನಗೌಡ, ಬಾಳನಾಯಕರು ಎಂಬವರು ರಾಯಣ್ಣನ ನಿಷ್ಠಾವಂತರಂತೆ ನಂಬಿಸಿ, ರಾಯಣ್ಣನ ಕತ್ತಿ, ಕಬರ ಬಿಟ್ಟು ತೊಟ್ಟ

ಚಣ್ಣ ಜಳಕಕ್ಕೆ ತರಳಿದಾಗ ಅವನನ್ನು ಮೋಸದಲ್ಲಿ ಹಿಡಿದು ನಂಬಿಕೆ ದ್ರೋಹ ಮಾಡಿದರು. ಬ್ರಿಟಿಷ್ ಅಧಿಕಾರಿ ಅವನಿಗೆ ಗಲ್ಲು ಶಿಕ್ಷೆ ವಿಧಿಸಿದ. ರಾಯಣ್ಣನನ್ನು ನಂದಗಡದಲ್ಲಿ ಗಲ್ಲಿಗೇರಿಸಲಾಯಿತು. ನಮ್ಮ ಜನಪದ ಕವಿಗಳು ಈ ಎಲ್ಲ ಐತಿಹಾಸಿಕ ಘಟನೆಗಳನ್ನು ವರ್ಣಮಯವಾಗಿ ಚಿತ್ರಿಸಿದ್ದಾರೆ. ಇನ್ನೂ ಕೋಲು ಪದಗಳಲ್ಲಿ ಸಂಗೊಳ್ಳಿ ರಾಯಣ್ಣ ಸ್ವಂತಕ ಶೂರಣ್ಣ, ಕಿತ್ತೂರ ನಾಡ ಹುಲಿಯಣ್ಣ ಎಂದು ವರ್ಣಿಸಲಾಗಿದೆ.

**ಹಾರಿಹೋಯಿತು ನಂದ್ಗಡದಿ ರಾಯನ ಪ್ರಾಣಪಕ್ಷಿ**
**ಸ್ವಾತಂತ್ರ್ಯ ರಕ್ಷಣೆಗೆ ಚೇತನ ಶಕ್ತಿ ಇದು ಕೋಲ**
**ನಂದಿ ಹೋಯಿತು ನಾಡ ಕಿತ್ತೂರ ಜ್ಯೋತಿ**
**ಕಾರಿಂದ ಕತ್ತಲೆ ಕವಿಯಿತು ಗಾಡಾಂಧಕಾರ ಕೋಲ**

ಎಂದು ಚಿತ್ರಿಸಿದ್ದಾರೆ. ಫಾಸಿ ಶಿಕ್ಷೆ ಆದೇಶಿಸಿದ ಅಧಿಕಾರಿಯೇ ರಾಯಣ್ಣನ ಸಾವಿಗೆ ಮರುಗಿ ಅವನ ಶೌರ್ಯ ಮತ್ತು ಸಂಘಟನಾ ಕೌಶಲಕ್ಕೆ ಗೌರವ ತೋರಿ ಅವನ ಅಂತ್ಯಸಂಸ್ಕಾರಕ್ಕೆ ಹಣವನ್ನು ನೀಡಿದನಂತೆ. ಈ ಅಜಾತಶತ್ರುವಿನ ಸತ್ತ ಜಾಗದ ಮೇಲೆ ಗಿಡ ನೆಟ್ಟರೆಂದು, ಮಕ್ಕಳಾಗದವರು ಆ ಗಿಡಕ್ಕೆ ತೊಟ್ಟಿಲು ಕಟ್ಟಿದರೆ ಪುತ್ರ ಸಂತಾನವಾಗುವುದೆಂದು ನಮ್ಮ ಜನಪದದ ನಂಬಿಕೆ. ರಾಯಣ್ಣ ಸತ್ಯವಂತನೆಂದು ಅವರು ಭಾವಿಸುತ್ತಾರೆ. ಅನೇಕ ಚೌಪದಿ, ತ್ರಿಪದಿಗಳಲ್ಲಿ ರಾಯಣ್ಣನ ಹಾಗೂ ಚನ್ನಮ್ಮನ ಬಗ್ಗೆ ಜನಪದ ಹಾಡುಗಳಿವೆ.

**ನರಗುಂದದ ಬಾಬಾಸಾಹೇಬ :**

ನರಗುಂದದ ರಾಜ ಬಾಬಾಸಾಹೇಬನು ತನಗೆ ಗಂಡು ಮಕ್ಕಳು ಇಲ್ಲದಿದ್ದರಿಂದ ದತ್ತು ತೆಗೆದುಕೊಳ್ಳಲು ಅನುಮತಿ ಕೋರಿ ಕಂಪನಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದನು. ಕಂಪನಿ ಸರ್ಕಾರ ಅದನ್ನು ತಿರಸ್ಕರಿಸಿತು. ಇದರಿಂದ ಕುಪಿತಗೊಂಡ ಬಾಬಾಸಾಹೇಬ ಹೆಮ್ಮಿಗೆಯ ಕೆಂಚನಗೌಡ, ಸೂರಟೂರ ದೇಸಾಯಿ, ಆನೆಗುಂದಿಯ ಶ್ರೀರಂಗರಾಯ, ಮುಂಡರಗಿಯ ಭೀಮರಾಯ ಮುಂತಾದ ಯೋಧರನ್ನು ಕಟ್ಟಿಕೊಂಡು ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದನು.

**ದತ್ತಕಕ್ಕೆ ಅಪ್ಪಣೆ ದೊರೆಯಲಿಲ್ಲವಂತೆ**
**ಕುಲದ ಬಾಗಿಲು ಮುಚ್ಚಿತಂತೆ**
**ಕಲ್ಲಾದ ಮನಗಳೊಳಗೆ**
**ಕಣ್ಣೀರಿನ ಮಾತು ಬೆರೆತಂತೆ**
**ತಾಯಿ ದೇವಿಗೆ ಕೈ ಜೋಡಿಸಿ**
**ಮೌನದೊಳಗೇ ಅಳುತ್ತಿದ್ದಂತೆ**
**ಬೆಳಕಿನ ದಾರಿ ತೋರಿಸಿ ಎಂದು**
**ಕತ್ತಲೆಯೊಳಗೇ ಬೇಡುತ್ತಿದ್ದಂತೆ.**
**ಹೆಸರೊಂದು ಇಲ್ಲದ ಜೀವನ**
**ಖಾಲಿಯಾ ಮನೆಮನೆ**
**ಬಾಬಾಸಾಹೇಬರ ಎದೆಯೊಳಗೆ**
**ಮುಗಿಲು ತಾಕಿದ ನೋವೊಂದು ಮಲೆತೆ**
**ಅಯ್ಯೋ ವಿಧಿಯೇ ಏಕೆ ಹೀಗೆ?**
**ನ್ಯಾಯವೇ ಇಲ್ಲದ ಜಗವೇ**
**ಮನುಷ್ಯತ್ವದ ಬೇಡಿಕೆಗೂ**

**ಬೀಗ ಹಾಕಿದ ನೀನೇಕೆ?**

ಹೀಗೆ ನರಗುಂದ ಬಂಡಾಯವು ಗರತಿಯರ ಹಾಡು, ಕೋಲಾಟ, ಹಂತಿಯ ಹಾಡು, ಗೀಗೀ ಪದಗಳಲ್ಲಿ ಮಿಂಚಿದರೆ, ಲಾವಣಿಗಳಲ್ಲಿ ಭಾವಸಾಂದ್ರಗೊಂಡ ಅಂದಿನ ವೈಭವಯುಕ್ತ ಬದುಕು, ಬಂಡಾಯದ ದುರಂತ ಗೋಳಿನ ಆಕ್ರಂದನವನ್ನು ಜನಪದ ಕವಿ ಶಬ್ದಶಿಲ್ಪವಾಗಿ ಕಂಡರಿಸಿದ್ದಾನೆ.

ಬಾಬಾಸಾಹೇಬನು ಧಾರವಾಡದ ಪೊಲಿಟಿಕಲ್ ಏಜೆಂಟ್ ಮ್ಯಾನಸನ್‌ನ್ನು ಕೊಂದು ಅವನ ರುಂಡವನ್ನು ನರಗುಂದದ ಕೋಟೆಯ ಬಾಗಿಲಿಗೆ ಕಟ್ಟಿದನು. ಬ್ರಿಟಿಷರನ್ನು ಸಂಪೂರ್ಣವಾಗಿ ಭಾರತದಿಂದ ಹೊರಗಟ್ಟಬೇಕೆಂಬ ಮಹಾದಾಸೆಯಿಂದ ಅವರ ಪ್ರತಿಯೊಂದು ಚಟುವಟಿಕೆಗಳ ವಿರುದ್ಧ ದಂಗೆ ಎದ್ದನು. ಈತನ ದಂಗೆಗಳನ್ನು ಸಹಿಸಲಾಗದ ಬ್ರಿಟಿಷರು ಅವನನ್ನು ಬಂಧಿಸಿ ಕ್ರಿ.ಶ. 1858ರ ಜೂನ್ 12 ರಂದು ಬೆಳಗಾವಿಯಲ್ಲಿ ಗಲ್ಲಿಗೇರಿಸಿದರು. ಬಾಬಾಸಾಹೇಬನ ಸಾಹಸ ಕುರಿತು ಅನೇಕ ದಂತಕಥೆಗಳು, ಲಾವಣಿಗಳು ಹುಟ್ಟಿಕೊಂಡವು. ಹೀಗೆ ನರಗುಂದದ ಬಾಬಾಸಾಹೇಬ ಇಂದಿಗೂ ಉತ್ತರ ಕರ್ನಾಟಕ ಪ್ರದೇಶದ ಜನರ ಮನೆ ಮಾತಾಗಿದ್ದಾನೆ.

ಬಾಬಾಸಾಹೇಬನು ಶತ್ರುಗಳ ಕೈಗೆ ಸಿಗಲಿಚ್ಛಿಸದೆ ವೇಷ ಮರೆಸಿಕೊಂಡು ಕಾಡಿಗೆ ಹೋದನೆಂದು ಕೆಲವರು, ಹಾಗೆ ಹೋಗುವ ಮುನ್ನ ಪತ್ನಿ ಹಾಗೂ ತಾಯಿಯನ್ನು ಕಂಡು ಹೋದನೆಂದು ಮತ್ತೆ ಕೆಲವರು ವಿವರಿಸಿದ್ದಾರೆ. ಇತ್ತ ಅತ್ತೆ ಸೊಸೆ ಮಾನರಕ್ಷಣೆಗಾಗಿ:

**ಅತ್ತೆ ಸೊಸ್ಯಾರವರ ಜತ್ತದ ಹಿಡಿಕೊಂಡ**
**ಮುತ್ತಿನ ಮಾಲ ಇಳಿದಾರ ಕೊಣ್ಣೂರ**
**ಒತ್ತಿನ ಹೊಳಗೆ ಹೋಗ್ಯಾರ**

ಎಂದು ಹಾಡಿದ ಗರತಿ ಅವರ ಈ ದುರ್ಮರಣದ ಹೃದಯ ವಿದ್ರಾವಕ ಘಟನೆಯನ್ನು ಕಂಡು ಭಾವಪರವಶಳಾಗಿ:

**ಹಣ್ಣು ಮೆಣಸಿನಕಾಯಿ ಎಣ್ಣ್ಯಾಗ**
**ಅನ್ಯಾಯ್ದ ಊರ ಧಾರವಾಡ ನರಗುಂದ**
**ಹೆಣ್ಣು ಮಕ್ಕಳ ಗೋಳ ತಟ್ಟವ್ವಾ**

ಎನ್ನುತ್ತಾ ಜಾನಪದ ಗರತಿ ದುರಂತಕ್ಕೆ ಕಾರಣರಾದವರಿಗೆ ಹಿಡಿಶಾಪ ಹಾಕಿದ್ದಾಳೆ.

**ಹಲಗಲಿಯ ಮಹಾವೀರರು:**

ಇವರದು ಅರಣ್ಯವಾಸ, ಸತತ ಪರಿಶ್ರಮ ಜೀವನ. ಹರಿತವಾದ ಶಸ್ತ್ರಾಸ್ತ್ರಗಳನ್ನು ಹಿಡಿದು ಪ್ರಾಣಿಗಳ ಜೊತೆ ಅಡವಿಗಳಲ್ಲಿ ಹೋರಾಡುವುದನ್ನೇ ತಮ್ಮ ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬದುಕುತ್ತಿದ್ದ ಹಲಗಲಿ ಬೇಡ ಜನಾಂಗದ ನಾಡಪ್ರೇಮವನ್ನು ನಾವು ಹೃದಯ ತುಂಬಿ ನೆನೆಯಲೇಬೇಕು. ಹಲಗಲಿ ಮುಧೋಳ ತಾಲೂಕಿನ ಒಂದು ಪುಟ್ಟ ಗ್ರಾಮ. ಆದರೆ ಅದು ಅನೇಕ ರಾಷ್ಟ್ರಪ್ರೇಮಿಗಳಿಗೆ ಜನ್ಮ ಕೊಟ್ಟಿದೆ. ಕ್ರಿ.ಶ. 1857ರ ಶಸ್ತ್ರಾಸ್ತ್ರ ನಿಷೇಧ ಕಾಯಿದೆ ಈ ಹೋರಾಟಕ್ಕೆ ಕಾರಣವಾಯಿತು. ಸದಾ ಶಸ್ತ್ರಾಸ್ತ್ರಗಳನ್ನೇ ಅವಲಂಬಿಸಿ ಬದುಕುತ್ತಿದ್ದ ಈ ಜನಾಂಗಕ್ಕೆ ಇದರಿಂದ ತುಂಬಾ ತೊಂದರೆಯಾಯಿತು. ಅದು ಅವರ ಪ್ರತಿಷ್ಠೆಯ ಪ್ರಶ್ನೆಯಾಯಿತು. ಯಾಕೆಂದರೆ ಈ ಕಾಯಿದೆಯನ್ವಯ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವುದು ಅಪರಾಧವಾಗಿತ್ತು. ಪ್ರಾಚೀನ ಕಾಲದಿಂದಲೂ ಈ ಆಯುಧಗಳನ್ನು ಆಸ್ತಿಯಾಗಿಸಿಕೊಂಡು ಅವುಗಳನ್ನು ದೇವರೆಂದು ಅವರು ಪೂಜಿಸುತ್ತಿದ್ದರು.

**ಬಿಲ್ಲು ಬಾಣದ ಹರಕೆ ತಾಯಿ ಬೇಡ ತಾಯಿ**
**ಬಿಲ್ಲು ಬಾಣವೇ ನಮ್ಮ ಹೊನ್ನಿನ ಐಶ್ವರ್ಯ ತಾಯಿ**
**ಬೇಡರ ಬಿಲ್ಲು ಬಾಣ ಹೊಡೆದರೆ ಮರಗಳು ಮಾತಾಡೋದು**
**ಹಲಗಲಿ ರಾಯನ ಕೃಪೆ ಇದ್ದರೆ ಮಲಗುತಿರೋ ಕಾಡೂ ಎಚ್ಚರಾಗೋದು**

ಹೀಗೆ ಅವರಲ್ಲಿರುವ ಎಲ್ಲ ಆಯುಧಗಳನ್ನು ಹಲಗಲಿ ಬೇಡರು ಪೂಜಿಸುತ್ತಿದ್ದರು ಎಂದು ಜನಪದ ಲಾವಣಿಕಾರರು ರಚಿಸಿದ್ದಾರೆ. ಈ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸುವುದೆಂದರೆ ಅವರ ಸ್ವಾಭಿಮಾನಕ್ಕೆ ಕುಂದೆನಿಸಿತು. ಅದು ಅವರ ಶರಣಾಗತಿ ಎಂಬುದು ಅವರ ಭಾವನೆಯಾಗಿತ್ತು. ಈ ನಾಡಿನ ಬಹುತೇಕ ಗೌಡರು, ದೇಸಾಯರು, ಜಮೀನುದಾರರು ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಿದರು. ಆದರೆ ಹಲಗಲಿಯ ಬೇಡರು ನಿರಾಕರಿಸಿದರು. ಜನಪದರು ಲಯದಲ್ಲಿ ರಚಿಸಿದ ಹಾಡು ಹೀಗಿದೆ:

**ಕತ್ತಿ ನಮ್ಮ ಅಜ್ಜನ ಕಟ್ಟಿ**
**ಕಾಡಿನ ದಾರಿಯ ಸಂಗತಿ**
**ಹಲಗಲಿ ಬೇಡರ ಮನೆಗಿದೆ**
**ಹೋರಾಟದ ಹದಿನೊಂದು ಶಕ್ತಿ**
**ಬೆಳಗಿನ ಜಾವ ಕತ್ತಿಗೆ ಆರತಿ**
**ಕಾಡಿನ ದೇವಿಗೆ ನೇಮ**
**ಬೇಡರ ಮನದ ಧೈರ್ಯಕ್ಕೆ**
**ಇದು ನಿತ್ಯದ ದಿವ್ಯ ಕೊಯ್ದು**

ಜನಪದರು ಹಲಗಲಿ ಬೇಡರು ಆಯುಧಗಳನ್ನು ಸರ್ಕಾರಕ್ಕೆ ಕೊಡದೆ ನಿರಾಕರಿಸಿದರು ಎಂಬ ಅಂಶವನ್ನು ಜನಪದ ಹಾಡುಗಳಲ್ಲಿ ಕಾಣುತ್ತೇವೆ. ಸುತ್ತಮುತ್ತಲಿನ ಹಳ್ಳಿಗಳಾದ ಮಂಟೂರ, ಬುದ್ನಿ, ಅಲಗುಂಡ ಮುಂತಾದ ಹಳ್ಳಿಗಳ ಬೇಡರು ತಮ್ಮ ತಮ್ಮ ಆಯುಧಗಳನ್ನು ತೆಗೆದುಕೊಂಡು ಬಂದು ಹಲಗಲಿಯಲ್ಲಿ ಸಂಗ್ರಹಿಸತೊಡಗಿದರು. ಹಲಗಲಿ ಗ್ರಾಮವು ಯುದ್ಧ ತಯಾರಿಯ ಕೇಂದ್ರವಾಗಿ ಮಾರ್ಪಟ್ಟಿತ್ತು. ಈ ಹೋರಾಟಕ್ಕೆ ಪ್ರಮುಖರೆಂದರೆ ಜಡಗಪ್ಪ ಮತ್ತು ಬಾಲಪ್ಪ ಸಹೋದರರು. ಇದನ್ನು ಅರಿತು ಇಂಗ್ಲಿಷರು ಲೆಫ್ಟಿನೆಂಟ್ ಕೇರನ ಮುಖಂಡತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು ಕಲಾದಗಿಯ ಮೂಲಕ ಕಳಿಸಿಕೊಟ್ಟರು. ಆ ಅಧಿಕಾರಿ ಮೊದಲು ಶಾಂತಿ ಸಂಧಾನಕ್ಕಾಗಿ ಪ್ರಯತ್ನ ಮಾಡಿದನು ಆದರೆ ಅದು ಫಲಿಸಲಿಲ್ಲ. ಈ ಹೋರಾಟದಲ್ಲಿ ಹಲಗಲಿ ಬೇಡರು ಸೋತಿರಬಹುದು ಆದರೆ ಒಂದು ಪುಟ್ಟ ಜನಾಂಗವು ಮಹಾನ್ ಸಾಮ್ರಾಜ್ಯದ ವಿರುದ್ಧ ದಂಗೆ ಹೂಡಿದ್ದು ಇತಿಹಾಸದ ಭಾಗವಾಗಿ ಉಳಿದಿದೆ.

**ಜಮಖಂಡಿ ಸಂಸ್ಥಾನದ ಶ್ರೀರಾಮಚಂದ್ರ ಪಟವರ್ಧನ :**

ಜಮಖಂಡಿ ಸಂಸ್ಥಾನದಲ್ಲಿ ಕ್ರಾಂತಿ ಮಾಡಿದ ಶ್ರೀರಾಮಚಂದ್ರ ಪಟವರ್ಧನ ಅವರ ಕ್ರಾಂತಿಯ ಬಗ್ಗೆ ಜನಪದ ಲೋಕಗೀತೆಗಳಲ್ಲಿ ಅವರ ಬದುಕಿನ ಕ್ರಾಂತಿಯನ್ನು ನಮ್ಮ ಜನಪದರು ಲಾವಣಿಗಳಲ್ಲಿ, ಜನಪದ ಹಾಡುಗಳಲ್ಲಿ ಮೊದಲಾದವುಗಳಲ್ಲಿ ಕಾಣುತ್ತೇವೆ. ಕ್ರಿ.ಶ. 1857ರಲ್ಲಿ ಜಮಖಂಡಿಯಲ್ಲಿ ಶ್ರೀರಾಮಚಂದ್ರ ಪಟವರ್ಧನ ಆಡಳಿತ ನಡೆಸಿದ್ದನು. ಅವನ ಸೇನಾಧಿಕಾರಿಯಾಗಿ ಛಟ್ಟುಸಿಂಗ್ ಹಜಾರೆ ಕೆಲಸ ಮಾಡುತ್ತಿದ್ದನು. ಛಟ್ಟುಸಿಂಗ್ ರಜಪೂತ ಜನಾಂಗಕ್ಕೆ ಸೇರಿದವನು. ಹುಟ್ಟು ಶೂರನಾದ ಈ ಯೋಧ ಜಮಖಂಡಿಯಲ್ಲಿ ಬ್ರಿಟಿಷರ ವಿರುದ್ಧ ಯುದ್ಧ ತಯಾರಿಯನ್ನು ಮಾಡಿದ್ದನು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದನು, ಸೈನ್ಯವನ್ನು ಸಂಘಟಿಸಿದ್ದನು. ಇದಕ್ಕೆ ರಾಜನಾದ ರಾಮಚಂದ್ರ ಪಟವರ್ಧನದ ಬೆಂಬಲವಿತ್ತು. ಆದರೆ

ದುರಾದೃಷ್ಟವಶಾತ್ ಈ ವಿಷಯ ಇಂಗ್ಲಿಷರಿಗೆ ತಿಳಿಯಿತು. ಜಮಖಂಡಿಯ ವಿದ್ಯಮಾನಗಳ ಅಧ್ಯಯನ ಹಾಗೂ ಅಲ್ಲಿಯ ಕ್ರಾಂತಿಯನ್ನು ಅಡಗಿಸಲು ಬ್ರಿಟಿಷರು ಮಾಲಕಾಮ್ ಎಂಬ ಅಧಿಕಾರಿಯ ನೇತೃತ್ವದಲ್ಲಿ ಒಂದು ಸೈನ್ಯದ ತುಕಡಿಯನ್ನು ಕಳುಹಿಸಿದರು. ಅವರು 1858ರ ಮಾರ್ಚ್ 20 ರಂದು ಜಮಖಂಡಿಯನ್ನು ಮುತ್ತಿ ರಾಮಚಂದ್ರ ಪಟವರ್ಧನ ಹಾಗೂ ಅವನ ಸೇನಾಧಿಕಾರಿ ಛಟ್ಟುಸಿಂಗನನ್ನು ಬಂಧಿಸಿದರು. ಆನಂತರ ಇಡೀ ಜಮಖಂಡಿಯ ಕೋಟೆಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಶೋಧನಾ ಕಾರ್ಯ ಪ್ರಾರಂಭಿಸಿದರು.

ಮರುದಿನ ರಾಜನನ್ನು ಬೆಳಗಾವಿ ಜೈಲಿಗೆ ಕಳಿಸಿದರು. ಶೋಧನೆಯ ಅವಧಿಯಲ್ಲಿ ಛಟ್ಟುಸಿಂಗ್‌ನು ಈ ಜಮಖಂಡಿಯಲ್ಲಿ ನಡೆದ ಎಲ್ಲ ಯುದ್ಧ ತಯಾರಿಗೆ ತಾನೇ ಜವಾಬ್ದಾರ, ಇದರಲ್ಲಿ ರಾಜನಿಗೆ ಈ ಹೋರಾಟದ ವಿಷಯ ಗೊತ್ತಿಲ್ಲವೆಂದು ಹೇಳಿ ತಾನೇ ಅಪರಾಧಿ ಎಂದು ಒಪ್ಪಿಕೊಂಡನು. ತನ್ನ ಅರಸು ಮತ್ತು ರಾಜ್ಯವನ್ನು ಉಳಿಸಲು ತಾನೇ ಬಲಿಯಾಗಲು ಛಟ್ಟುಸಿಂಗ್ ಸಿದ್ಧನಾದನು. ಜಮಖಂಡಿಯಲ್ಲಿ ಸಾರ್ವಜನಿಕವಾಗಿ ಅವನನ್ನು ಗಲ್ಲಿಗೇರಿಸಲಾಯಿತು. ಜಮಖಂಡಿಯಲ್ಲಿ ಸಂಗ್ರಹಿಸಿಡಲಾಗಿದ್ದ ಎಲ್ಲ ಮದ್ದುಗುಂಡುಗಳನ್ನು ಸಾಗಿಸಿದರು. ರಾಮಚಂದ್ರ ಪಟವರ್ಧನನ್ನು ಬಿಡುಗಡೆ ಮಾಡಿದರು. ಛಟ್ಟುಸಿಂಗನ ತ್ಯಾಗ ಮತ್ತು ಬಲಿದಾನಗಳು ಇಂದಿಗೂ ಜಮಖಂಡಿ ಜನರ ಮನೆಯ ಮಾತಾಗಿವೆ.

**ಜಮಖಂಡಿ ಜಮೀನಲಿ ಕಾಟವಿತ್ತು ಬೇಗನೆ**
**ಪಟವರ್ಧನ ಬಂದವನಾ ಹೋರಿನಲಿ ತೂಗನೆ**
**ಬಡವರ ಮಾತು ಕೇಳಿನಿಂತ ನ್ಯಾಯದ ಗಜಮಲ್ಲ**
**ಸಂಸ್ಥಾನದ ದೌರ್ಜನ್ಯವ ಕೆಡವಿದ ಜನದ ಹಗಲಬಳ್ಳಿ**
**ಎದ್ದೇಳಮ್ಮಾ ಜಮಖಂಡಿ ಜನರೇ**
**ಪಟವರ್ಧನ ದೀಪ ಬೆಳಗಿತ್ತೆ**
**ಅನ್ಯಾಯದ ಕತ್ತಲ ಗಾಳಿ**
**ಸತ್ಯದ ಬಿರುಗಾಳಿ ಬಂತೆ**
**ಕೋಗಿಲೆ ಕೂಗದೆ ಮೌನವಾದರೂ**
**ಪಟವರ್ಧನ ಬಾಯಲ್ಲಿ ಸತ್ಯ ಹಾಡು**
**ಬೀದಿಯಲ್ಲಿ ಕೂಗಿದ ಗಾಳಿ ಛಟ್ಟುಸಿಂಗ್ ಬರತ್ತಾನೆ**
**ದಬ್ಬಾಳಿಕೆ ಮಾಡಿದವರಿಗೆ ಭಯದ ಬಿರುಗಾಳಿ ಹೊಡೆಯನೆ**
**ಕುದುರೆ ಮೇಲೆ ಬಂದವನೇ ಕೆಂಪು ಗಾಳಿ ಎಬ್ಬಿಸಿ**
**ಜನರ ಪರ ನಿಲ್ಲುವವನ ಶೈಲಿ ನ್ಯಾಯದ ಬಾಣ ಹೊತ್ತಿಸಿ.**
**ಛಟ್ಟುಸಿಂಗ್ ಬಲವೊಂದು ಹೋರಾಟದ ಬೆಂಕಿಯೊಂದು**
**ಸಂಸ್ಥಾನದ ಗಡಿಹಾಕಿ ನ್ಯಾಯ ತೆರೆಯುವವನ ಹೊಳಹೊಂದು**
**ಛಟ್ಟುಸಿಂಗ್ ಪಟವರ್ಧನ ಇಬ್ಬರೂ ಒಂದೇ ಜ್ವಾಲೆ**
**ಜನಪದ ಕಥೆಯಲಿ ಇಂದಿಗೂ ಬದುಕಿವೆ ಆ ನೆನಪು ತಾಳೆ**

ಹೀಗೆ ಜಮಖಂಡಿ ಕ್ರಾಂತಿಯ ಬಗ್ಗೆ ಜಾನಪದ ಹಾಡುಗಳು, ಹಂತಿಯ ಹಾಡುಗಳು, ಗೀಗೀ ಪದಗಳು, ಕೋಲಾಟ ಪದಗಳು ಮತ್ತು ಲಾವಣಿಗಳಲ್ಲಿ ಭದ್ರವಾಗಿ ಅಂದಿನ ವೈಭವಯುಕ್ತ ಬದುಕು, ಬಂಡಾಯದ ದುರಂತ, ಗೋಳಿನ ಆಕ್ರಂದನವನ್ನು ಜನಪದ ಕವಿ ಶಬ್ದಶಿಲ್ಪವಾಗಿ ಕಂಡರಿಸಿದ್ದಾರೆ. ಶ್ರೀ ರಾಮಚಂದ್ರ ಪಟವರ್ಧನ ಮತ್ತು ಛಟ್ಟುಸಿಂಗ್ ಅವರ ಮಹತ್ವದ ಹೋರಾಟದ ಕ್ರಿಯೆಗಳನ್ನು ನಮ್ಮ ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ.

**ಸಮಾರೋಪ:**

ಒಟ್ಟಾರೆ ನಮ್ಮ ಜಾನಪದ ಸಾಹಿತ್ಯದಲ್ಲಿ ಅಂದಿನ ಸ್ವಾತಂತ್ರ್ಯ ಚಳುವಳಿಯ ನೆಲೆಗಳನ್ನು ಕಾಣುತ್ತೇವೆ. ಈ ಐತಿಹಾಸಿಕ ನಾಯಕರಾದ ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ, ಹಲಗಲಿ ಮಹಾವೀರರು, ಜಮಖಂಡಿಯ ಶ್ರೀ ರಾಮಚಂದ್ರ ಪಟವರ್ಧನ ಅವರ ಹೋರಾಟದ ಮಹತ್ವವನ್ನು ನಮ್ಮ ಜನಪದರು ತಮ್ಮ ಹಾಡುಗಳಲ್ಲಿ, ಲಾವಣಿಗಳಲ್ಲಿ ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಇವುಗಳನ್ನು ಮುಂದಿನ ಪೀಳಿಗೆಗೂ ಉಳಿಸಿಕೊಳ್ಳಬೇಕಾದ ಗುರುತರ ಕರ್ತವ್ಯ ಇಂದು ಸಮಸ್ತ ಜನತೆಯ ಕೈಯಲ್ಲಿದೆ.

**ಪರಾಮರ್ಶನ ಗ್ರಂಥಗಳು:**


1. ಎ.ಎಂ. ಅಣ್ಣೇಗೇರಿ : ಡಾ. ಜೆ. ಎಫ್. ಫ್ಲೀಟ್
2. ನಿಂಗಣ್ಣ ಸಣ್ಣಕ್ಕಿ ಮತ್ತು ಶಿವರುದ್ರಪ್ಪ ಬಾವಿಕಟ್ಟಿ : ಜಾನಪದದಲ್ಲಿ ಕಿತ್ತೂರು
3. ಸೋಮಶೇಖರ ಇಮ್ರಾಪೂರ : ಜಾನಪದ ಹಾಡುಗಳಲ್ಲಿ ನರಗುಂದ ಬಾಬಾಸಾಹೇಬ
4. ವೈ.ಕೆ. ಮುದ್ದು ಕೃಷ್ಣ (ಸಂ) : ಸ್ವರ್ಣ ಸಂಚಯ 1998
5. ಶೀಲಾಕಾಂತ ಪತ್ತಾರ (ಸಂ) : ಕೃಷ್ಣ ಪ್ರಭೆ 2000
6. ಎ.ಎಸ್. ಹೂಗಾರ (ಸಂಗ್ರಹ) : ಕ್ರಾಂತಿವೀರ ಬಾಬಾಸಾಹೇಬ
7. ನಿಂಗಣ್ಣ ಸಣ್ಣಕ್ಕಿ : ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ
8. ಟಿ.ಎಸ್. ರಾಜಪ್ಪ (ಸಂ) : ಧಾರವಾಡ ಜಿಲ್ಲೆಯ ಲಾವಣಿಗಳು
9. ವೀರಣ್ಣ ರಾಜೂರ (ಸಂ) : ಜಾನಪದ ಸಾಹಿತ್ಯ ದರ್ಶನ
10. ಜೀ. ಶಂ. ಪರಮಶಿವಯ್ಯ : ಗದ್ದಗಿಮಠದ ಬರಹಗಳು
11. ಆರ್.ಬಿ. ಮೂಲಗಿ : ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು
12. ಕೆ.ಎನ್. ದೊಡ್ಡಮನಿ : ಬೆಳಗಾವಿ ಜಿಲ್ಲೆಯ ಜನಪದ ಕಾವ್ಯ ಪ್ರಕಾರಗಳು



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.